*

**ಓಎಸ್ ನಂಃ 27/2020**
**ಡಿಡಬ್ಲೂಃ 3**

**<u>ಸಾಕ್ಷಿಗೆ ದಿನಾಂಕ 27-02-2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು</u>**

<u>ಪಾಟೀ ಸವಾಲುಃ ವಾದಿ ಪರ ಶ್ರೀ. ವಿ.ಎಮ್.ಎ. ವಕೀಲರಿಂದ</u>

ನಾನು ನನ್ನ ಪ್ರಮಾಣ ಪತ್ರಕ್ಕೆ ಓದಿ ಸಹಿ ಮಾಡಿರುತ್ತೇನೆ. ಸದರಿ ಪ್ರಮಾಣ ಪತ್ರವನ್ನು ಪ್ರತಿವಾದಿ ತಯಾರಿಸಿರುತ್ತಾನೆ. ನನಗೆ ಪ್ರಮಾಣ ಪತ್ರದಲ್ಲಿ ಬರೆದಿರುವ ಎಲ್ಲಾ ವಿಷಯಗಳ ಬಗ್ಗೆ ಮಾಹಿತಿ ಇದೆ. ಪ್ರತಿವಾದಿಗೆ ಸರಕಾರದಲ್ಲಿ ಕೆಲಸ ಸುಮಾರು 50 ವರ್ಷಗಳಿಗಿಂತ ಮೊದಲು ಸಿಕ್ಕಿದ್ದು ನನಗೆ ತಾರೀಖು ನಿಖರವಾಗಿ ಹೇಳಲು ಬರುವುದಿಲ್ಲ. ನನಗೆ ಕೊಲ್ಲೂರು ಗ್ರಾಮದಲ್ಲಿ 2 ಎಕ್ರೆ ಕ್ಷೇತ್ರ ಸರ್ವೆ ನಂಬರ್ 140ರಲ್ಲಿದ್ದು ನಾನು ಅದರ ಕುರಿತು ನನ್ನ ಪ್ರಮಾಣ ಪತ್ರದಲ್ಲಿ ನಮೂದು ಮಾಡಿಲ್ಲ. ನಿಮಗೆ ಕೊಲ್ಲೂರು ಗ್ರಾಮದಲ್ಲಿ ಯಾವುದೇ ಆಸ್ತಿ ಇಲ್ಲ ಎಂದರೆ ಸರಿಯಲ್ಲ. ಸರ್ವೆ ನಂಬರ್ 319ರ ದಕ್ಷಿಣಕ್ಕೆ ಯಾರ ಹೊಲ ಇದೆ ಎಂದು ಕೇಳಿದಾಗ ಸಾಕ್ಷಿ ಒಬ್ಬ ಲಂಬಾಣಿ ವ್ಯಕ್ತಿಯ ಹೊಲ ಇದೆ ನನಗೆ ಆತನ ಹೆಸರು ಗೊತ್ತಿಲ್ಲ ಎಂದು ನುಡಿಯುತ್ತಾರೆ. ನನಗೆ ಸರ್ವೆ ನಂಬರ್ 319ರ ಉತ್ತರ ಕ್ಕೆ ಯಾರ ಹೊಲ ಇದೆ ಎಂದು ಹೇಳಲು ಬರುವುದಿಲ್ಲ. ನಿಮಗೆ ಸರ್ವೆ ನಂಬರ್ 319 ಮತ್ತು ಸರ್ವೆ ನಂಬರ್ 319/3ರ ಬಗ್ಗೆ ಯಾವುದೇ ಮಾಹಿತಿ ಇಲ್ಲ ಎಂದರೆ ನಾನು ಅಲ್ಲಿ ಜಾಸ್ತಿ ಹೋಗುವುದಿಲ್ಲ ಆದ ಕಾರಣ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ದಾವಾ ಆಸ್ತಿಯಲ್ಲಿ ವಾದಿಯೇ ಕಬ್ಜ ಹೊಂದಿದ್ದಾರೆ ಎಂದರೆ ಸರಿಯಲ್ಲ. ಪ್ರತಿವಾದಿ ದಾವಾ ಆಸ್ತಿಯಿ ಕಬ್ಜ ಹೊಂದಿದ್ದಾನೆಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ವಾದಿ ಪ್ರತಿವಾದಿಗೆ ದಾವಾ ಆಸ್ತಿಯ ಕುರಿತು ಯಾವುದೇ ಬೆದರಿಕೆ ಹಾಕಿಲ್ಲ ಎಂದರೆ ಸರಿ. ಪ್ರತಿವಾದಿಯ ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ. ಹೇ . ಕೇ. ಸರಿ ಇದೆ.

ಸಿವಿಲ್ ನ್ಯಾಯಾಧೀಶರು,
ಚಿತ್ತಾಪೂರ.

*

**ಓಎಸ್ ನಂಃ 27/2020**

**ಡಿಡಬ್ಲೂಃ 2**

<u>**ಸಾಕ್ಷಿಗೆ ದಿನಾಂಕ 27-02-2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು**</u>

<u>ಪಾಟೀ ಸವಾಲುಃ ವಾದಿ ಪರ ಶ್ರೀ. ವಿ.ಎಮ್.ಎ. ವಕೀಲರಿಂದ</u>

ನನಗೆ ಕೊಲ್ಲೂರು ಗ್ರಾಮದಲ್ಲಿ ಯಾವುದೇ ಆಸ್ತಿ ಇಲ್ಲ. ನಿಮ್ಮ ಪ್ರಮಾಣ ಪತ್ರದ ಪ್ರಕಾರ 1983ರಲ್ಲಿ ನಿಮಗೆ 13 ಅಥವಾ 14 ವರ್ಷ ವಯಸ್ಸು ಇರಬಹುದು ಎಂದರೆ ಸರಿ. ನೀವು 1983ರಲ್ಲಿ ನಬಾಲಿಕರಿದ್ದ ಕಾರಣ ಪ್ರತಿವಾದಿಯ ಕುಟುಂಬದವರಿಗೆ ಆ ಸಮಯದಲ್ಲಿ ಯಾವ ಹಣಕಾಸಿನ ಅವಶ್ಯಕತೆ ಇತ್ತೋ ಇಲ್ಲವೋ ಎಂದು ನಿಮಗೆ ಗೊತ್ತಾಗುತ್ತಿರಲಿಲ್ಲ ಎಂದರೆ ಸರಿಯಲ್ಲ. ರಾಜಪ್ಪ ಅವರು ದಾವಾ ಆಸ್ತಿಯನ್ನು ವಾದಿಗೆ ಮಾರಾಟ ಮಾಡಿದಾಗಿನಿಂದ ವಾದಿಯೇ ದಾವಾ ಆಸ್ತಿಯ ಮಾಲಿಕರು ಮತ್ತು ಕಬ್ಜೆ ಹೊಂದಿದ್ದಾರೆ ಎಂದರೆ ಸರಿಯಲ್ಲ. ಪ್ರತಿವಾದಿಗೆ ವಾದಿಯ ಹೆಸರಿನಲ್ಲಿ ಖರೀದಿ ಪತ್ರ ಆಗಿದೆ ಎಂದು ಗೊತ್ತಾದ ನಂತರ ಅದರ ಕುರಿತು ವಾದಿ ಯಾವುದೇ ಸಿವಿಲ್ ಅಥವಾ ಕ್ರಿಮಿನಲ್ ಪ್ರಕರಣವನ್ನು ವಾದಿಯ ವಿರುದ್ಧ ಹೂಡಿಲ್ಲ. ಸಾಕ್ಷಿ ಮುಂದುವರಿದು ಅವರು ದಾವೆ ಅಥವಾ ಕ್ರಿಮಿನಲ್ ಪ್ರಕರಣ ಹೂಡಿದ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ನಿಮಗೆ ಈ ಪ್ರಕರಣದ ಕುರಿತು ಯಾವುದೇ ಮಹಿತಿ ಇಲ್ಲ ನೀವು ಪ್ರತಿವಾದಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ಇಂದಿಗೂ ವಾದಿ ಕಬ್ಜದಲ್ಲಿದ್ದಾರೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ. ಹೇ . ಕೇ. ಸರಿ ಇದೆ.

ಸಿವಿಲ್ ನ್ಯಾಯಾಧೀಶರು,
ಚಿತ್ತಾಪೂರ.